KACM010017932023

Presented on : 03-08-2023
Registered on : 03-08-2023

**IN THE COURT OF**
**PRL. DISTRICT AND SESSIONS JUDGE. CHIKKAMAGALURU**
**AT Chikkamagaluru,CHIKKAMAGALURU**
**Presided Over by RAJESHWARI N. HEGDE**
**Com.O.S./95/2023**

Plaintiff:
M/s Prasad Traders, Rep. By its Prop. Sri. B.S. Raghavendra Prasad.
Address: M/s Prasad Traders, Rep. By its Prop. Sri. B.S. Raghavendra Prasad S/o B.L. Srinivas, 45yrs. APMC Yard, Kadur Town. Kadur Tq. Ckm.

VERSUS

Defendant:
1. Smt. Radha. W/o Late. Krishna, 45yrs. Flour Mill, R/o S.M. Krishna Extn. Doddapattanagere Road, Kadur Town. Ckm.
2:Kum. Roopa. D/o Late. Krishna, 21yrs. R/o S.M. Krishna Extn., Doddapattanagere Road, Kadur Town. Ckm.
3:Kum. Ranjitha.D/o Late. Krishna, 19yrs. R/o S.M. Krishna Extn. Doddapattanagere Road, Kadur Town. Ckm

---

Advocate for Plaintiff: K.H.Mallikarjuna
Advocate for Defendants: K.N. CHANDRASHEKAR

ದಿನಾಂಕಃ 24-11-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು

**ಪಾಟೀ ಸವಾಲುಃ ಪ್ರತಿವಾದಿ ಪರವಾಗಿ ೦ಃ ಕೆ ಎನ್ ಸಿ ವಕೀಲರಿಂದಃ**

1. ಹದಿನೇಳು ವರ್ಷಗಳಿಂದ ನಾನು ಪ್ರಸಾದ್ ಟ್ರೇಡರ್ಸ್ ನ್ನು ನಡೆಸುತ್ತಿದ್ದೇನೆ. ಎಪಿಎಂಸಿ ನಿಯಮಗಳ ಬಗ್ಗೆ ನನಗೆ ಮಾಹಿತಿ ಇದೆ. ದಿನಾಂಕಃ 27-07-2020 ಕ್ಕಿಂತ ಮೊದಲು ಎಪಿಎಂಸಿ ಸೆಸ್ ಶೇ.1 ರಂತೆ ಇತ್ತು, ತದನಂತರ, ಶೇ.0.35 ರಂತೆ ಇದೆ ಎನ್ನುವುದು ಸರಿ. ಯಾವುದೇ ವಹಿವಾಟನ್ನು ನಡೆಸುವಾಗ ಎಪಿಎಂಸಿ ಸೆಸ್ ನ್ನು ಕಡ್ಡಾಯವಾಗಿ ಕೊಡಬೇಕು ಎನ್ನುವುದು ಸರಿ.

2. ನಿಪಿ.3 ರಿಂದ 5 ರವರೆಗಿನ ರಶೀದಿಗಳನ್ನು ಸಾಕ್ಷಿದಾರರಿಗೆ ತೋರಿಸಿ ಇದರಲ್ಲಿ ಎಪಿಎಂಸಿ ಸೆಸ್ ನ್ನು ಕೊಟ್ಟ ಬಗ್ಗೆ ನಮೂದು ಇಲ್ಲ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿದಾರರು ಮೊದಲು ಸೆಸ್ ಕಟ್ಟುತ್ತಿದ್ದೆವೆಂದು, ನೇರವಾಗಿ ರೈತರಿಂದ ಖರೀದಿ ಮಾಡಿದಾಗ ಸೆಸ್ ಕಟ್ಟುವುದು ಬೇಡ ಎಂದು ಹೇಳಿದರೆಂದು , ಕಾರಣ ಎಪಿಎಂಸಿ ಸೆಸ್ ಕಟ್ಟಿಲ್ಲ ಎಂದು ಹೇಳಿರುತ್ತಾರೆ.

3. ಕೃಷ್ಣಾ ಅವರಿಗೆ ಸೇರಿದ ಟ್ರೇಡರ್ಸ್ ಆಗಲೀ ಅಥವಾ ಸಂಸ್ಥೆಯ ಹೆಸರನ್ನು ನಿಪಿ.3 ರಿಂದ 5 ರವರೆಗಿನ ರಶೀತಿಯಲ್ಲಿ ಕಾಣಿಸಿಲ್ಲ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿದಾರರು ಕೃಷ್ಣಾ ವರಿಗೆ ಲೈಸೆನ್ಸ್ ಇರಲಿಲ್ಲ ಕಾರಣ ಹೆಸರನ್ನು ನಮೂದಿಸಿಲ್ಲ ಎಂದು, ಆದರೆ ಕೃಷ್ಣಾ ಅವರಿಗೆ ಸಂಬಂಧಪಟ್ಟ ಆಧಾರ್ ನಂಬರ್ ಮತ್ತು ಪಾನ್ ನಂಬರ್ ಮಾತ್ರ ನಮೂದಿಸಲಾಗಿದೆ ಎಂದು ಹೇಳಿರುತ್ತಾರೆ.

4. ಯಾವುದೇ ಬಿಲ್ಲನ್ನು ಕೊಡುವಾಗ ಕ್ಯಾಷ್ ಬಿಲ್ ಬೇರೆ , ಕ್ರೆಡಿಟ್ ಬಿಲ್ ಬೇರೆ ಎಂದರೆ ಸರಿ. ಕ್ಯಾಷ್ ಬಿಲ್ ಆದರೆ 2 ಬಿಲ್ಲುಗಳು ಅಂದರೆ ಒಂದು ಅಸಲು ಬಿಲ್ ಮತ್ತೊಂದು ಡೂಪ್ಲಿಕೇಟ್ ಇರುತ್ತದೆ , ಕ್ರೆಡಿಟ್ ಬಿಲ್ ಆದರೆ ಟ್ರಿಪ್ಲಿಕೇಟ್ ಇರುತ್ತದೆ ಎಂದರೆ ಸರಿ.

5. ಕ್ಯಾಷ್ ಬಿಲ್ ಆದಾಗ ಅಸಲು ಬಿಲ್ಲನ್ನು ಗ್ರಾಹಕರಿಗೆ ಕೊಟ್ಟು , ಕಾರ್ಬನ್ ನಕಲನ್ನು ಮಾರಾಟ ಮಾಡಿದವರು ಇಟ್ಟುಕೊಳ್ಳುತ್ತಾರೆ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿದಾರರು ಹೌದೆಂದು ಹೇಳಿರುತ್ತಾರೆ. ಸಾಕ್ಷಿದಾರರು ಸ್ವಇಚ್ಛೆಯಿಂದ ಇದಕ್ಕೆ ಜಿಎಸ್ ಟಿ ಶೇ.0 ಇರುತ್ತದೆ ಎಂದು ಹೇಳಿರುತ್ತಾರೆ. ಆಡಿಟಿಂಗ್ ಗೆ ಕೊಡುವಾಗ ನಿಮ್ಮ ಬಳಿ ಇಟ್ಟುಕೊಂಡಿರುವ ಕಾರ್ಬನ್ ಬಿಲ್ಲುಗಳನ್ನು , ಜಿಎಸ್‌ಟಿ ಇಲ್ಲದೇ ಇದ್ದರೂ ಸಹ, ಸಲ್ಲಿಸಬೇಕಾಗುತ್ತದೆ ಎನ್ನುವುದು ಸರಿ.

6. ಕ್ರೆಡಿಟ್ ಬಿಲ್ ಆದಲ್ಲಿ ಮೊದಲ ಬಿಲ್ಲನ್ನು ನೀವು ಇಟ್ಟುಕೊಳ್ಳುತ್ತೀರಿ, 2 ನೇ ಬಿಲ್ಲನ್ನು ಗ್ರಾಹಕರಿಗೆ ಕೊಡುತ್ತೀರಿ, 3 ನೇ ಬಿಲ್ಲನ್ನು ಟ್ಯಾಕ್ಸ್ ಗೆಂದು ಕೊಡಲಾಗುತ್ತದೆ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿದಾರರು ಮೊದಲ ಬಿಲ್ಲನ್ನೇ ಗ್ರಾಹಕರಿಗೆ ಕೊಡುವುದೆಂದು, 2 ನೇ ಬಿಲ್ಲನ್ನು ನಾವು ಇಟ್ಟುಕೊಳ್ಳುವುದೆಂದು , 3 ನೇ ಬಿಲ್ಲನ್ನು

ಟ್ಯಾಕ್ಸ್ ಗೆಂದು ಕೊಡಲಾಗುತ್ತದೆ ಎಂದು ಹೇಳಿರುತ್ತಾರೆ.

7. ಕ್ರೆಡಿಟ್ ಬಿಲ್ ಆದಲ್ಲಿ, ಗ್ರಾಹಕರು ಹಣವನ್ನು ಕೊಟ್ಟ ನಂತರ ನೀವು ಇಟ್ಟುಕೊಂಡಿದ್ದ ಮೊದಲ ಬಿಲ್ಲನ್ನೇ ಗ್ರಾಹಕರಿಗೆ ಕೊಡುತ್ತೀರಿ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿದಾರರು ಸರಿಯಲ್ಲವೆಂದು ನಾವು 2 ನೇ ಬಿಲ್ಲನ್ನೇ ಇಟ್ಟುಕೊಳ್ಳುವುದು , ಅದನ್ನೇ ಗ್ರಾಹಕರಿಗೆ ಕೊಡುವುದು ಎಂದು ಹೇಳಿರುತ್ತಾರೆ.

8. ಕ್ರೆಡಿಟ್ ಬಿಲ್ ಆದಲ್ಲಿ ಅಂತಹ ಬಿಲ್ ಗೆ ಗ್ರಾಹಕರ ಸಹಿಯನ್ನು ಕಡ್ಡಾಯವಾಗಿ ಪಡೆಯಲಾಗುತ್ತದೆ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿದಾರರು ಕ್ರೆಡಿಟ್ ಬಿಲ್ ಗೆ ಗ್ರಾಹಕರ ಸಹಿ ಪಡೆಯುತ್ತೇವೆಂದು , ಗ್ರಾಹಕರು ಇಲ್ಲದೇ ಇದ್ದಲ್ಲಿ ಅವರು ಕಳುಹಿಸಿದ ವಾಹನದ ಡ್ರೈವರ್ ಸಹಿ ಪಡೆಯುತ್ತೇವೆಂದು ಹೇಳಿರುತ್ತಾರೆ.

9. ಯಾವುದೇ ವಾಹನ ಎಪಿಎಂಸಿ ಒಳಗೆ ಬಂದರೆ ಗೇಟ್ ಎಂಟ್ರಿ ನಮೂದಾಗುತ್ತದೆ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿದಾರರು ಅದನ್ನೇನು ರೆಕಾರ್ಡ್ ಮಾಡುವುದಿಲ್ಲ ಎಂದು ಹೇಳುತ್ತಾರೆ. ಇಲ್ಲಿ ಹಾಕಿರುವ ಬಿಲ್ ಗಳನ್ನು ಸೃಷ್ಟಿ ಮಾಡಿರುವುದರಿಂದ ಗೇಟ್ ಎಂಟ್ರಿ ಇರುವುದಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

10. ಜಿಎಸ್‌ಟಿ ರಿಜಿಸ್ಟರ್ ಆದ ಬಗ್ಗೆ ನಂಬರ್ ನ್ನು ಬಿಲ್ ನಲ್ಲಿ ಕಾಕಣಿಸಲೇ ಬೇಕು ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿದಾರರು ಹಳೇ ಬಿಲ್ ಆದರೆ ಕಾಣಿಸುತ್ತೇವೆಂದು ಹೊಸ ಬಿಲ್ ಆದರೆ ಪ್ರಿಂಟ್ ಆಗಿರುತ್ತದೆ ಎಂದು ಹೇಳಿರುತ್ತಾರೆ. ಈ ಪ್ರಕರಣದಲ್ಲಿ ಇರುವ ಬಿಲ್ಲುಗಳು ಹಳೆ ಬಿಲ್ಲುಗಳು ಎಂದು ಹೇಳಿರುತ್ತಾರೆ.

11. ನಿಪಿ.3 ರಿಂದ 5 ರವರೆಗಿನ ಬಿಲ್ಲುಗಳ ಬಗ್ಗೆ ಆಡಿಟಿಂಗ್ ಆಗಿದೆ ಎನ್ನುವ ಬಗ್ಗೆ ದಾಖಲೆಯನ್ನು ಹಾಜರುಪಡಿಸಲು ನಿಮಗೆ ತೊಂದರೆ ಇಲ್ಲ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿದಾರರು ಹಾಜರುಪಡಿಸುತ್ತೇನೆ ಎಂದು ಹೇಳಿರುತ್ತಾರೆ.

12. ದಿನಾಂಕಃ 17-07-2021 ರಂದು ಚೆಕ್ ಡಿಸಾನರ್ ಆಯಿತೆಂದು ಹೇಳಿದ್ದೀರಿ, ಆ ದಿನಾಂಕದಂದು ಕೃಷ್ಣಾರವರು ಜೀವಂತ ಇದ್ದರೋ ಇಲ್ಲವೋ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿದಾರರು ಗೊತ್ತಿಲ್ಲ ಎಂದು ಹೇಳಿರುತ್ತಾರೆ. ಕೃಷ್ಣಾ ಅವರು ಜೀವಂತ ಇಲ್ಲ ಎಂದು ನಿಮಗೆ ಗೊತ್ತಾಗಿದ್ದು ಯಾವಾಗ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿದಾರರು ಚೆಕ್ ಡಿಸಾನರ್

ಆದ ಒಂದು ವಾರದ ನಂತರ ಗೊತ್ತಾಗಿದ್ದು ಎಂದು ಹೇಳುತ್ತಾರೆ. ಈ ವಿಷಯದ ಬಗ್ಗೆ ನಿಮ್ಮ ವಕೀಲರಿಗೇನಾದರೂ ಹೇಳಿದ್ದೀರಾ, ವಾದ ಪತ್ರದಲ್ಲಾಗಲೀ , ನೋಟೀಸ್ ನಲ್ಲಾಗಲೀ ಅಥವಾ ನಿಮ್ಮ ಮುಖ್ಯವಿಚಾರಣೆ ಬದಲಾಗಿ ಹಾಕಿರುವ ಅಫಿಡೇವಿಟ್ ನಲ್ಲಾಗಲೀ ಹೇಳಿದ್ದೀರಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿದಾರರು ಹೇಳಿದ್ದೇನೆ ಎಂದು ಮತ್ತು ಕಾಣಿಸಲಾಗಿದೆ ಎಂದು ಹೇಳಿರುತ್ತಾರೆ.

13. ನಿಪಿ.1 ರಲ್ಲಿ ಇರುವ ಬರವಣಿಗೆ ಕೃಷ್ಣಾ ಅವರದಲ್ಲ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿದಾರರು ಅದರಲ್ಲಿರುವ ಸಹಿ ಮತ್ತು ಇತರ ಬರವಣಿಗೆಗಳೂ ಸಹ ಕೃಷ್ಣಾ ಅವರದೇ ಎಂದು ಹೇಳಿರುತ್ತಾರೆ.

14. ನಿಪಿ.1(ಎ) ಕೃಷ್ಣಾ ಅವರ ಸಹಿ ಅಲ್ಲ ಎನ್ನುವುದು ಸರಿಯಲ್ಲ.

(ಮುಂದಿನ ಪಾಟೀ ಸವಾಲಿಗೆ ಸಮಯ ಬೇಕೆಂದು ಕೆಲವು ದಾಖಲೆಗಳನ್ನು confront ಮಾಡುವ ಸಲುವಾಗಿ ಹಾಜರುಪಡಿಸಬೇಕಾಗಿದೆ ಎಂದು ಕೇಳಿರುತ್ತಾರೆ, ಮುಂದೂಡಲಾಗಿದೆ.

ಮರು ವಿಚಾರಣೆ ಃ ಇಲ್ಲ
(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ.)
ಓ.ಹೇ.ಕೇ.ಸ.ಇ.ಎ.ಒ.

Sd/-
(ಶುಭ ಗೌಡರ್)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿ ಸಹಿಃ-

ಚ

ದಿನಾಂಕಃ 05-12-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು

**ಮುಂದುವರಿದ ಪಾಟೀ ಸವಾಲುಃ ಪ್ರತಿವಾದಿ ಪರವಾಗಿ ಃ ಕೆ ಎನ್ ಸಿ ವಕೀಲರ ಪರವಾಗಿ ಃ ಕುಃ ಹೆಚ್ ಜೆ ಎಸ್ ವಕೀಲರು ಸಮಯ ಕೇಳಿರುತ್ತಾರೆ, ಯಾವುದೇ ಸಕಾರಣ ಇರುವುದಿಲ್ಲ, 2 ಸಾರಿ ಕೇಸನ್ನು ಪಾಟೀ ಸವಾಲಿಗೆಂದು ತೆಗೆದುಕೊಂಡಾಗಲೇ ಪ್ರತಿವಾದಿ ವಕೀಲರು ಹಾಜರಿರುವುದಿಲ್ಲ, ಕಾರಣ ಮುಂದುವರಿದ ಪಾಟೀ ಸವಾಲು ಇಲ್ಲ ಎಂದು**

**ತೆಗೆದುಕೊಳ್ಳಲಾಗಿದೆ**

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ.)
ಓ.ಹೇ.ಕೇ.ಸ.ಇ.ಎ.ಒ.

Sd/-
(ಶುಭ ಗೌಡರ್)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿ ಸಹಿಃ
ಚ

**ದಿನಾಂಕಃ 05-01-2024 ರಂದು ಈ ನ್ಯಾಯಾಲಯದ ಆದೇಶದ ಪ್ರಕಾರ ಪ್ರಾಸಾ-1 ನ್ನು ಪುನಃ ಕರೆಯಿಸಲಾಗಿದೆ**

**ದಿನಾಂಕಃ 16-01-2024 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು**

**ಪಾಟೀ ಸವಾಲುಃ ಪ್ರತಿವಾದಿಗಳ ಪರವಾಗಿ ೦ಃ ಪ್ರತಿವಾದಿಗಳು, ಪ್ರತಿವಾದಿ ಪರ ವಕೀಲರಾದ ಶ್ರೀ ಕೆ.ಎನ್.ಸಿ. ವಕೀಲರು ಹಾಜರಿರುವುದಿಲ್ಲ, ಯಾವುದೇ ಸಕಾರಣ ಇರವುದಿಲ್ಲ, ಕಾರಣ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಗಿದೆ**

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ.)
ಓ.ಹೇ.ಕೇ.ಸ.ಇ.ಎ.ಒ.

Sd/-
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿ ಸಹಿಃ-

**ದಿನಾಂಕಃ 14-03-2024 ರಂದು ಈ ನ್ಯಾಯಾಲಯದ ಆದೇಶದ ಪ್ರಕಾರ ಪ್ರಾಸಾ-1 ನ್ನು ಪುನಃ ಕರೆಯಿಸಲಾಗಿದೆ**

**ದಿನಾಂಕಃ 19-04-2025 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು**

**ಮುಂದುವರಿದ ಮುಖ್ಯ ವಿಚಾರಣೆಃ ಶ್ರೀ ಕೆ.ಹೆಚ್.ಎಂ. ವಕೀಲರಿಂದಃ**

19. 2021-22 ನೇ ಸಾಲಿನ ಆದಾಯ ತೆರಿಗೆ ಪಾವತಿ ಸಲ್ಲಿಸಿರುವ ಬಗ್ಗೆ ದಾಖಲೆಯನ್ನು ಹಾಜರುಪಡಿಸಿದ್ದು (ಒಟ್ಟು 8 ಹಾಳೆಗಳು ಇರುತ್ತವೆ), ಅದನ್ನು ನಿ.ಪಿ. 12 ಎಂದು ಗುರುತಿಸಲಾಯಿತು. ಕಲಂ.65-ಬಿ ಸಾಕ್ಷ್ಯ ಅಧಿನಿಯಮದ ಪ್ರಮಾಣ

ಪತ್ರವನ್ನು ಹಾಜರುಪಡಿಸಿದ್ದು, ಪ್ರಮಾಣ ಪತ್ರವನ್ನು ನಿ.ಪಿ.13 ಎಂದು ಗುರುತಿಸಲಾಯಿತು.

**(ಪಾಟೀ ಸವಾಲುಃ ಪ್ರತಿವಾದಿಗಳ ಪರವಾಗಿಃ ಪ್ರತಿವಾದಿಗಳ ಪರ ವಕೀಲರ ಕೋರಿಕೆಯ ಮೇರೆಗೆ ಮುಂದೂಡಲಾಯಿತು)**

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ.)
ಓ.ಹೇ.ಕೇ.ಸ.ಇ.ಎ.ಒ.

Sd/-

(ರಾಜೇಶ್ವರಿ ಎನ್.ಹೆಗಡೆ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿ ಸಹಿಃ-

**ದಿನಾಂಕಃ 24-09-2025 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು**

**ಮುಂದುವರಿದ ಪಾಟೀ ಸವಾಲುಃ ಪ್ರತಿವಾದಿಗಳ ಪರಃ ಶ್ರೀ ಕೆ.ಎನ್.ಸಿ. ವಕೀಲರಿಂದಃ**

20. ನಿ.ಪಿ.3 ರಿಂದ 5 ಎಂದು ಗುರುತಿಸಲಾದ ಬಿಲ್ ಗಳು ಪ್ರಸಾದ್ ಟ್ರೇಡರ್ಸ್ ಗೆ ಸಂಬಂಧಪಟ್ಟಿದ್ದು ಎಂದರೆ ಸರಿ. ನಿ.ಪಿ.12-income tax returns ದಾಖಲೆ ನನ್ನ ವೈಯುಕ್ತಿಕ ಆದಾಯಕ್ಕೆ ಸಂಬಂಧಪಟ್ಟಿದ್ದು ಎಂದರೆ ಸರಿ.

21. ನನ್ನ ವೈಯುಕ್ತಿಕ ಖಾತೆಯಿಂದ ವ್ಯವಹಾರ ಆಗಿದೆ ಎಂದು ಎಲ್ಲಿಯೂ ನಮೂದಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರಿದು ಸ್ವತಃ ನುಡಿದಿದ್ದಾರೆ ತಾನು ಪ್ರಸಾದ್ ಟ್ರೇಡರ್ಸ್ ನ ಮಾಲೀಕನಾಗಿರುತ್ತೇನೆ. ನಿ.ಪಿ.12 ರಲ್ಲಿ ಪ್ರಸಾದ್ ಟ್ರೇಡರ್ಸ್ ನ ಆದಾಯಕ್ಕೆ ಸಂಬಂಧಿಸಿದಂತೆ ಯಾವುದೇ ನಮೂದು ಇಲ್ಲ ಎಂದರೆ ಸರಿ.

22. 1 ನೇ ಪ್ರತಿವಾದಿಯ ಗಂಡ ಲೇಟ್ ಕೃಷ್ಣ ರವರಿಗೆ ಇದ್ದಂತಹ ಆಸ್ತಿಗಳ ದಾಖಲೆಯನ್ನು ನ್ಯಾಯಾಲಯಕ್ಕೆ ಕೊಟ್ಟಿಲ್ಲ ಎಂದರೆ ಸರಿ. ಸದರಿ ಕೃಷ್ಣ ರವರ ಕುಟುಂಬಕ್ಕೆ ಸರ್ಕಾರದಿಂದ ಮಂಜೂರಾದಂತಹ 20 x 30 ಅಳತೆಯ ನಿವೇಶನದ

ಹೊರತಾಗಿ ಬೇರೆ ಯಾವುದೇ ಆಸ್ತಿ ಇಲ್ಲ ಎಂದರೆ ನನಗೆ ಗೊತ್ತಿಲ್ಲ. ಸದರಿ 20 x 30 ಅಳತೆಯ ನಿವೇಶನದಲ್ಲಿ ಸದರಿ ಕೃಷ್ಣರವರು ಒಂದು ಶೀಟಿನ ಮನೆಯನ್ನು ನಿರ್ಮಾಣ ಮಾಡಿದ್ದು, ಸದರಿ ಮನೆಯಲ್ಲಿ 1 ನೇ ಪ್ರತಿವಾದಿ ಹಿಟ್ಟಿನ ಗಿರಣಿಯನ್ನು ನಡೆಸುತ್ತಿದ್ದಾರೆ ಎಂದರೆ ಸರಿ. ಹಿಟ್ಟಿನ ಗಿರಣಿಗೂ ಕೃಷ್ಣರವರಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ನನಗೆ ಗೊತ್ತಿಲ್ಲ.

23. 2022-ಜೂನ್ ನಂತರದಲ್ಲಿ ಎ ಪಿ ಎಂ ಸಿಯಲ್ಲಿ ನಡೆಯುವ ವ್ಯವಹಾರಗಳಿಗೆ ಸೆಸ್ ಇಲ್ಲ ಎಂದರೆ ಸರಿ. 2021 ರಲ್ಲಿ ಸೆಸ್ ಕಟ್ಟಿದ ಬಾಬ್ತು ನಾನು ಯಾವುದೇ ದಾಖಲೆಯನ್ನು ಹಾಜರುಪಡಿಸಿಲ್ಲ ಎಂದರೆ ಸಾಕ್ಷಿಯು 2021 ರಲ್ಲಿ ಸೆಸ್ ಕಟ್ಟುವುದು ಇರಲಿಲ್ಲ ಎಂದು ಹೇಳುತ್ತಾರೆ.

24. ಪ್ರತಿವಾದಿಗಳಿಗೂ ನನಗೂ ಯಾವುದೇ ವ್ಯವಹಾರ ಇಲ್ಲದಿದ್ದರೂ ಸಹಾ ಅಕ್ರಮ ಲಾಭ ಪಡೆಯಲು ಪ್ರತಿವಾದಿಗಳ ವಿರುದ್ಧ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ರಾಗಿಯನ್ನು ಮಾರಾಟ ಮಾಡಿದ ಸಂದರ್ಭದಲ್ಲಿ ಜಿ ಎಸ್ ಟಿ ಬರುತ್ತದೆ ಎನ್ನುವುದು ಸರಿಯಲ್ಲ. ಜಿ.ಎಸ್.ಟಿ. ದಾಖಲೆಯನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಜಿ ಎಸ್ ಟಿ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇ ಆದಲ್ಲಿ ಈ ವ್ಯವಹಾರಕ್ಕೆ ಸಂಬಂಧಿಸಿದ ನಮೂದು ಇರುತ್ತಿತ್ತು ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ.)
ಓ.ಹೇ.ಕೇ.ಸ.ಇ.ಎ.ಒ.

Sd/-
(ರಾಜೇಶ್ವರಿ ಎನ್.ಹೆಗಡೆ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿ ಸಹಿಃ-

**ದಿನಾಂಕಃ 14-01-2026 ರ ನ್ಯಾಯಾಲಯದ ಆದೇಶದ ಪ್ರಕಾರ ಪ್ರಾಸಾ-1 ನ್ನು ಪುನಃ ಕರೆಯಿಸಲಾಗಿದೆ**

**ದಿನಾಂಕಃ 14-01-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು**

25. ಈ ದಿನ ಈ ಕೆಳಕಂಡ ದಾಖಲಾತಿಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ನಿಶಾನೆಗಳನ್ನಾಗಿ ಗುರುತಿಸಲಾಯಿತು.

1. ಪ್ರತಿವಾದಿಯವರ ಯಜಮಾನರಾದ ಕೃಷ್ಣ ಅವರ ಹೆಸರಿನಲ್ಲಿ ಇರುವ ಸರ್ವೆ ನಂ. 134/8 ಕ್ಕೆ ಸಂಬಂಧಿಸಿದಂತೆ 2022-23 ರ RTC -ನಿ.ಪಿ.17 .
2. ಸರ್ವೆ ನಂ.134/8 ಕ್ಕೆ ಸಂಬಂಧಿಸಿದಂತೆ ಮ್ಯುಟೇಷನ್ ರಿಜಿಸ್ಟರ್ ಪ್ರತಿ -ನಿ.ಪಿ.18.
3. 1 ನೇ ಪ್ರತಿವಾದಿಯ ಹೆಸರಿನಲ್ಲಿರುವ ಸರ್ವೆ ನಂ. 134/6 ಕ್ಕೆ ಸಂಬಂಧಿಸಿದಂತೆ ಮ್ಯುಟೇಷನ್ ರಿಜಿಸ್ಟರ್ ಪ್ರತಿ -ನಿ.ಪಿ.19.
4. ಸರ್ವೆ ನಂ.134 ಕ್ಕೆ ಸಂಬಂಧಿಸಿದಂತೆ ದಿನಾಂಕಃ 01-01-2020 ರಿಂದ 27-09-2025 ರವರೆಗೆ ಋಣಭಾರ ಪತ್ರ ಪ್ರತಿ (4 ಹಾಳೆಗಳು ಇರುತ್ತವೆ)-ನಿ.ಪಿ.20.
5. ಸಿ.ಸಿ.ನಂ.190/2019 ರ ಆದೇಶ ಪುಟದ ದೃಢೀಕೃತ ನಕಲು -ನಿ.ಪಿ.21.
6. ಸಿ.ಸಿ.ನಂ.190/2019 ರಲ್ಲಿ ಕಲಂ.147 ಎನ್ ಐ ಆ್ಯಕ್ಟ್ ರಲ್ಲಿ ಸಲ್ಲಿಸಿದ ಅರ್ಜಿಯ ದೃಢೀಕೃತ ನಕಲು-ನಿ.ಪಿ.22
7. ಸಿ.ಸಿ.ನಂ.190/2019 ರ ಫಿರ್ಯಾದು ಮತ್ತು ಪ್ರಮಾಣೀಕೃತ ಹೇಳಿಕೆಯ ದೃಢೀಕೃತ ಪ್ರತಿಗಳನ್ನು ಕ್ರಮವಾಗಿ ನಿ.ಪಿ.23 ಮತ್ತು ನಿ.ಪಿ.24.
8. ದಿನಾಂಕಃ 20-09-2018 ರ ರೂ.25,000/-ಗಳ ಚೆಕ್ ಮತ್ತು ದಿನಾಂಕಃ 20-10-2018 ರ ರೂ.53,000/-ಗಳ ಚೆಕ್ ದೃಢೀಕೃತ ನಕಲುಗಳು-ನಿ.ಪಿ.25 (ಒಂದೇ ಹಾಳೆಯಲ್ಲಿ ಇರುತ್ತದೆ) .
9. ದಿನಾಂಕಃ 22-10-2018 ರಂದು ಬ್ಯಾಂಕಿನವರು ನೀಡಿದ 2 ಹಿಂಬರಹಗಳು ಒಂದೇ ಹಾಳೆಯಲ್ಲಿದ್ದು, (ಹಿಂಬದಿ ಪುಟದಲ್ಲಿಯೂ ಇರುತ್ತದೆ)-

ನಿ.ಪಿ.26.

10. ದಿನಾಂಕಃ 20-11-2018 ರ ನೋಟೀಸಿನ ದೃಢೀಕೃತ ನಕಲು -ನಿ.ಪಿ.27.

11. Acknowledgment ನ ದೃಢೀಕೃತ ನಕಲು -ನಿ.ಪಿ.28.

12. ಸಿ.ಸಿ.ನಂ.190/2019 ರ ಆರೋಪಣೆಯ ದೃಢೀಕೃತ ನಕಲು-ನಿ.ಪಿ.29.

13. ಸಿ.ಸಿ.ನಂ.190/2019 ರ ವಕಾಲತ್ ದೃಢೀಕೃತ ನಕಲು-ನಿ.ಪಿ.30.

14. ಸಿ.ಸಿ.ನಂ.190/2019 ರ ದಸ್ತುಗಿರಿ ವಾರೆಂಟ್ ದೃಢೀಕೃತ ನಕಲು, ಸಮನ್ಸ್ ದೃಢೀಕೃತ ನಕಲುಗಳನ್ನು (ಒಟ್ಟು 6 ಹಾಳೆಗಳು ಇರುತ್ತವೆ) -ನಿ.ಪಿ.31.

15. ಸಿ.ಸಿ.ನಂ.37/2019 ರ ಆದೇಶ ಪುಟದ ದೃಢೀಕೃತ ನಕಲು-ನಿ.ಪಿ.32.

16. ಸಿ.ಸಿ.ನಂ.37/2019 ರ ಫಿರ್ಯಾದಿನ ದೃಢೀಕೃತ ನಕಲು-ನಿ.ಪಿ.33.

17. ದಿನಾಂಕಃ 20-08-2018 ರೂ.25,000/-ಗಳ ಚೆಕ್ ದೃಢೀಕೃತ ನಕಲು-ನಿ.ಪಿ.34.

18. ದಿನಾಂಕಃ21-08-2018 ರ ಬ್ಯಾಂಕಿನ ಹಿಂಬರಹದ ದೃಢೀಕೃತ ನಕಲು-ನಿ.ಪಿ.35.

19. ದಿನಾಂಕಃ 19-09-2018 ರ ನೋಟೀಸ್ ದೃಢೀಕೃತ ನಕಲು -ನಿ.ಪಿ.36.

20. Receipt and Acknowledgment ದೃಢೀಕೃತ ನಕಲು (ಒಂದೇ ಹಾಳೆಯಲ್ಲಿ ಇರುತ್ತವೆ)-ನಿ.ಪಿ.37.

21. ಎ ಪಿ ಎಂ ಸಿ ಕಾಯ್ದೆ ತಿದ್ದುಪಡಿ ಆದೇಶದ ಪ್ರತಿಗಳು along with ಗೆಜೆಟ್ ಪ್ರತಿಗಳನ್ನು ಒಟ್ಟಾಗಿ -ನಿ.ಪಿ.38.

(ಪಾಟೀ ಸವಾಲು ಪ್ರತಿವಾದಿ ಪರಃ ಶ್ರೀ ಕೆ ಎನ್ ಸಿ ವಕೀಲರ ಕೋರಿಕೆಯ ಮೇರೆಗೆ ಮುಂದುವರಿದ ಪಾಟೀ ಸವಾಲನ್ನು ಮುಂದೂಡಲಾಯಿತು)

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ.)

ಓ.ಹೇ.ಕೇ.ಸ.ಇ.ಎ.ಒ.

Sd/-
(ರಾಜೇಶ್ವರಿ ಎನ್.ಹೆಗಡೆ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿ ಸಹಿಃ-

**ದಿನಾಂಕಃ 11-02-2026 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ, ಪ್ರಮಾಣ ವಚನ ಬೋಧಿಸಲಾಯಿತು**

**ಮುಂದುವರಿದ ಪಾಟೀ ಸವಾಲುಃಪ್ರತಿವಾದಿಗಳ ಪರಃ ಶ್ರೀ ಕೆ.ಎನ್.ಸಿ.ವಕೀಲರಿಂದಃ**

26. ನಿ.ಪಿ.21 ರಿಂದ ನಿ.ಪಿ.37 ರವರೆಗಿನ ದಾಖಲೆಗಳ ಇರುವಿಕೆ ಬಗ್ಗೆ ಮಲ್ಲೇಶಪ್ಪರವರೇ ನನಗೆ ಮಾಹಿತಿ ಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರಿದು ಸ್ವತಃ ನುಡಿದಿದ್ದಾರೆ ಕಡೂರಿನ ರಾಮಸ್ವಾಮಿ ವಕೀಲರು ಮಾಹಿತಿ ಕೊಟ್ಟಿದ್ದಾರೆ ಎಂದು, ಹಾಗೂ ನನ್ನ ನೋಟೀಸಿಗೆ ಪ್ರತಿವಾದಿಗಳು ಕೊಟ್ಟ ನಿ.ಪಿ.8 ರ reply notice ನಲ್ಲಿ ಸದರಿ ದಾಖಲೆಗಳ ಬಗ್ಗೆ ಅಂದರೆ ಮಲ್ಲೇಶಪ್ಪರವರ ಕೇಸಿನ ಬಗ್ಗೆ ಹೇಳಿರುತ್ತಾರೆ ಎಂದು ಹೇಳುತ್ತಾರೆ.

27. ನಿ.ಪಿ.8 ರ reply notice ನಲ್ಲಿ ಮಲ್ಲೇಶಪ್ಪರವರ ಕೇಸಿನ ಬಗ್ಗೆ ನಮೂದಾಗಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರಿದು ತನ್ನ ವಕೀಲರು online ನಲ್ಲಿ search ಮಾಡಿ ಕೇಸ್ ನಂಬರ್ ತೆಗೆದಿದ್ದಾರೆ ಎಂದು ಹೇಳುತ್ತಾರೆ.

28. ನಿ.ಪಿ. 38 ರ ದಾಖಲೆ ಅಂದರೆ APMC ಗೆಜೆಟ್ ಪ್ರತಿಯಲ್ಲಿ APMC ಸೆಸ್ ರಾಗಿ ಬೆಳೆಗೆ ಇಲ್ಲ ಎಂದು ನಮೂದಿಲ್ಲ ಎಂದರೆ ಸರಿಯಲ್ಲ. ಪ್ರಾಂಗಣದಲ್ಲಿ ರಾಗಿ ಬೆಳೆಯನ್ನು ಹರಾಜು ಮಾಡುವ ಪ್ರಕ್ರಿಯೆ ಹಾಗೂ ರೈತರಿಂದ ನೇರವಾಗಿ ಟ್ರೇಡರ್ ರವರು ಬೆಳೆಯನ್ನು ಖರೀದಿ ಮಾಡುವ ಪ್ರಕ್ರಿಯೆ ಬೇರೆ ಬೇರೆ ಎಂದರೆ ಸರಿ. ನಿ.ಪಿ.38 ರ ಗೆಜೆಟ್ ನೋಟಿಫಿಕೆಷನ್ ಹರಾಜು ಪ್ರಕ್ರಿಯೆಗೆ ಸಂಬಂಧಪಟ್ಟ ನೋಟಿಫಿಕೇಷನ್ ಆಗಿದ್ದು, ಟ್ರೆಡರ್ ರವರಿಗೆ ಸಂಬಂಧಪಟ್ಟಿದ್ದಲ್ಲ ಎಂದರೆ ಸರಿಯಲ್ಲ.

29. ಮಲ್ಲೇಶಪ್ಪ ನನ್ನ ಸ್ನೇಹಿತರು ಎಂದರೆ ಸರಿಯಲ್ಲ. ನನ್ನ ಮತ್ತು ಮೃತ ಕೃಷ್ಣ ರವರ ನಡುವೆ ಯಾವುದೇ ವ್ಯವಹಾರ ನಡೆಯದಿದ್ದರೂ ಸಹಾ

ಮಲ್ಲೇಶಪ್ಪರವರ ಬಳಿ ಇದ್ದ ಚೆಕ್‌ನ್ನು ದುರುಪಯೋಗಪಡಿಸಿಕೊಂಡು ಈ ಪ್ರಕರಣವನ್ನು ಮೃತ ಕೃಷ್ಣರವರ ವಾರಸುದಾರರ (legal heirs)ಮೇಲೆ ಹೂಡಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ: ಇಲ್ಲ

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ.)
ಓ.ಹೇ.ಕೇ.ಸ.ಇ.ಎ.ಒ.

Sd/-11-02-2026.
(ರಾಜೇಶ್ವರಿ ಎನ್.ಹೆಗಡೆ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿ ಸಹಿ:-

ಜ

Visit **ecourts.gov.in** for updates or download mobile app “**eCourts Services**” from Android or iOS